# ವಿಷಯ ಸೂಚೀ


| ವಿಷಯ | | | ಪದ್ಯಸಂಖ್ಯೆ |
|---|---|---|---|
| ಪ್ರಸ್ತಾವನೆ, ವಿಷಯ ಸೂಚೀ, ಒಪ್ಪೋಲೆ, ಸೂಚಿತ ಪಾಠಗಳು | .... | .... | iii–xxxix |
| ಅಭಂಗವಿಟ್ಠಲನ ಸ್ತುತಿ | .... | .... | ೧ |
| ಈಶ್ವರನ ಸ್ತುತಿ | .... | .... | ೨ |
| ಗಣಪತಿಯ ಸ್ತುತಿ | .... | .... | ೩ |
| ಬನದಂಬಿಕೆಯ ಸ್ತುತಿ | .... | .... | ೪ |
| ಸತ್ಪುರುಷರ ವಂದನೆ | .... | .... | ೫ |
| ದುಷ್ಟರ ಸ್ವಭಾವ | .... | .... | ೬ |
| ಕವಿಯ ಹೆಮ್ಮೆ | .... | .... | ೭ |
| ಕಥಾವಸ್ತು | .... | .... | ೮ |
| ನಿಷಧ ದೇಶದ ವರ್ಣನೆ | .... | .... | ೯–೧೬ |
| ನಳನ ಜನನ, ದಿಗ್ವಿಜಯ ಮತ್ತು ಯುವರಾಜ ಪಟ್ಟಾಭಿಷೇಕ | | | ೧೭–೨೪ |
| ನಳನ ರಾಜ್ಯಭಾರದ ವರ್ಣನೆ | .... | .... | ೨೫–೩೫ |
| ನಳನು ದಮಯಂತಿಯ ರೂಪ ಲಾವಣ್ಯಗಳನ್ನು ಕೇಳಿ ಅವಳಲ್ಲಿ ಅನುರಕ್ತನಾಗಿ ಅವಳ ವಿರಹಜನಿತ ತಾಪದಿಂದ ಪೀಡಿತನಾಗುವುದು | .... | .... | ೩೬–೪೯ |
| ವಸಂತ ಋತುವಿನ ವರ್ಣನೆ | .... | .... | ೫೦–೬೦ |
| ಬೇಟೆಕಾರರ ಪ್ರೇರಣೆಯಂತೆ ನಳನು ಬೇಟೆಯಾಡಲು ಹೊರಡುವುದು | .... | .... | ೬೧–೬೫ |
| ಬೇಟೆಸಾಮುಗ್ರಿಯ ವರ್ಣನೆ | .... | .... | ೬೬–೬೯ |
| ಬೇಟೆಯ ವರ್ಣನೆ | .... | .... | ೭೦–೮೨ |
| ಪೂಗೊಳದ ವರ್ಣನೆ | .... | .... | ೮೩–೯೦ |
| ನಳನು ಪೂಗೊಳದಲ್ಲಿದ್ದ ಹೊನ್ನಹಂಸವನ್ನು ಹಿಡಿದುಕೊಳ್ಳಲು ಅದು ಅವನನ್ನು ದಮಯಂತಿಯು ವರಿಸುವಂತೆ ಮಾಡುವೆನೆಂದು ತಿಳಿಸಲು ಅವನು ಅದನ್ನು ಬಿಟ್ಟುದು. ಹಂಸವು ದಮಯಂತಿಯ ಸಮೀಪಕ್ಕೆ ಹೋದುದು | | | ೯೧–೧೧೫ |
| ರಾಜನು ತನ್ನ ಪಟ್ಟಣಕ್ಕೆ ಹಿಂತಿರುಗಿದುದು | | .... | ೧೧೬–೧೧೭ |

| ವಿಷಯ | ಪದ್ಯಸಂಖ್ಯೆ |
|---|---|
| ಕುಂಡಿನ ನಗರದಲ್ಲಿ ದಮಯಂತಿಯ ಉದ್ಯಾನವನದಲ್ಲಿದ್ದ ಕೊಳದ ವರ್ಣನೆ. ಅಲ್ಲಿಗೆ ಹಂಸಗಳ ಆಗಮನ | ೧೧೮–೧೨೬ |
| ಸಖಿಯರೊಡನೆ ದಮಯಂತಿಯ ಆಗಮನ ಮತ್ತು ಜಲ ಕೇಳಿಯ ವರ್ಣನೆ .... .... | ೧೨೭–೧೪೧ |
| ದಮಯಂತಿಯು ಕೊಳದಲ್ಲಿದ್ದ ಹೊನ್ನಹಂಸವನ್ನು ಹಿಡಿ ಯಲು ಹೋದಾಗ ಅದು ಅವಳಿಗೆ ಏಕಾಂತದಲ್ಲಿ ನಳನ ಗುಣಾದಿಗಳನ್ನು ತಿಳಿಸಿದುದು .... | ೧೪೨–೧೭೪ |
| ದಮಯಂತಿಯ ಸ್ಥಿತಿಯನ್ನು ಹಂಸವು ನಳನಿಗೆ ತಿಳಿಸಿದುದು | ೧೭೫–೧೮೦ |
| ಚಂದ್ರೋದಯದ ವರ್ಣನೆ .... .... | ೧೮೧–೧೮೫ |
| ದಮಯಂತಿಯ ವಿರಹತಾಪದ ವರ್ಣನೆ .... | ೧೮೬–೨೧೮ |
| ಭೀಮನೃಪನು ದಮಯಂತಿಯ ತಾಪಕ್ಕೆ ಕಾರಣವನ್ನು ತಿಳಿದು ಸ್ವಯಂವರವನ್ನೇರ್ಪಡಿಸಿ ರಾಜರಿಗೆ ಕರೆ ಯೋಲೆಯನ್ನು ಕಳುಹಿಸಿದುದು .... | ೨೧೯–೨೨೯ |
| ಗಣಪತಿಯ ಸ್ತುತಿ .... .... | ೨೩೦–೨೩೩ |
| ಪುರದ ವರ್ಣನೆ, ರಾಜರು ಕುಂಡಿನ ನಗರಕ್ಕೆ ಬರುವುದು | ೨೩೪–೨೪೫ |
| ನಾರದನಿಂದ ದಮಯಂತೀಸ್ವಯಂವರದ ಸುದ್ದಿಯನ್ನು ತಿಳಿದ ಇಂದ್ರ ಅಗ್ನಿ ಯಮ ವರುಣರು ಕುಂಡಿನ ನಗರಿಗೆ ತಮ್ಮ ರೂಪವನ್ನು ಮರೆಸಿಕೊಂಡು ಬರು ವಾಗ ದಾರಿಯಲ್ಲಿ ನಳನನ್ನು ಕಂಡು ತಮ್ಮ ನಿಜರೂಪ ಗಳನ್ನು ತೋರಿಸಿ ಅವನನ್ನು ದಮಯಂತಿಯಲ್ಲಿಗೆ ದೂತನಾಗಿ ಕಳುಹಿಸಿದುದು .... | ೨೪೬–೨೬೮ |
| ನಳನು ದಮಯಂತಿಯ ಹತ್ತಿರಕ್ಕೆ ಹೋಗಿ ಅವಳ ಪ್ರತ್ಯು ತ್ತರವನ್ನು ತಿಳಿದು ಬಂದು ಅದನ್ನು ದೇವತೆಗಳಿಗೆ ತಿಳಿಸುವುದು .... .... | ೨೬೯–೨೯೨ |
| ಇಂದ್ರ ಅಗ್ನಿ ಯಮ ವರುಣರು ನಳನಿಗೆ ವರವನ್ನು ಕೊಟ್ಟು ತಾವೂ ನಳನ ರೂಪವನ್ನು ತಾಳಿ ನಗರದ ಬಹಿರು ದ್ಯಾನದಲ್ಲಿರುವುದು .... .... | ೨೯೩–೩೦೬ |
| ಸ್ವಯಂವರಕ್ಕೆ ಬಂದ ರಾಜರನ್ನು ಭೀಮರಾಜನು ಸನ್ಮಾನಿ ಸುವುದು. ರಾಜರು ಸ್ವಯಂವರದ ದಿನ ಅಲಂಕಾರ ಮಾಡಿಕೊಂಡು ಮಂಟಪದಲ್ಲಿ ಬಂದು ನೆಲಸುವುದು | ೩೦೭–೩೧೧ |
| ಸ್ವಯಂವರ ಮಂಟಪಕ್ಕೆ ಬಂದ ದಮಯಂತಿಯ ವರ್ಣನೆ | ೩೧೨–೩೭೫ |
| ಸಖಿಯು ದಮಯಂತಿಗೆ ಮಂಟಪದಲ್ಲಿ ನೆರೆದಿರುವ ರಾಜರ ಗುಣದೋಷಗಳನ್ನು ವಿವರಿಸುವುದು .... | ೩೭೬–೩೯೦ |

| ವಿಷಯ | ಪದ್ಯಸಂಖ್ಯೆ |
|---|---|
| ನಳರೈವರಿದ್ದರೂ ನಿಜವಾದ ನಳನನ್ನೇ ದಮಯಂತಿಯು ವರಿಸಲು ನಳರೂಪವನ್ನು ಧರಿಸಿದ್ದ ಇಂದ್ರ ಅಗ್ನಿ ಯಮ ವರುಣರು ದಮಯಂತಿಗೆ ವರವನ್ನು ಕೊಡುವುದು .... .... | ೩೯೧–೪೦೭ |
| ದಮಯಂತಿಯು ನಳನನ್ನು ವರಿಸಲು ಕೋಪಗೊಂಡ ಇತರ ರಾಜರು ನಳನೊಡನೆ ಯುದ್ಧಮಾಡಿ ಸೋತು ಓಡಿಹೋಗುವುದು .... .... | ೪೦೮–೪೨೧ |
| ನಳ–ದಮಯಂತಿಯರ ವಿವಾಹ ವರ್ಣನೆ .... | ೪೨೨–೪೩೨ |
| ಭೋಜನದ ವರ್ಣನೆ .... .... | ೪೩೩–೪೭೦ |
| ಓಕುಳಿಯ ವರ್ಣನೆ .... .... | ೪೭೧–೪೮೧ |
| ಮದುವೆಯಾದಮೇಲೆ ನಳದಮಯಂತಿಯರು ನಿಷಧ ದೇಶಕ್ಕೆ ಹೋಗಿ ಅಲ್ಲಿ ಸುಖದಿಂದಿರುವುದು .... | ೪೮೨–೪೮೮ |
| ಕಲಿಯ ಪ್ರಭಾವದಿಂದ ನಳನು ಪುಷ್ಕರನೊಡನೆ ಜೂಜಾಡಿ ಸರ್ವಸ್ವವನ್ನೂ ಸೋತು ದಮಯಂತಿಯೊಡನೆ ಕಾಡಿಗೆ ಹೋಗಿ ಒಂದು ಪಾಳುದೇವಾಲಯದಲ್ಲಿ ಮಲಗಿರುವಾಗ ಅರ್ಧರಾತ್ರಿಯಲ್ಲಿ ದಮಯಂತಿಯೊಬ್ಬಳನ್ನೇ ಬಿಟ್ಟು ಹೋಗುವುದು .... | ೪೮೯–೫೪೦ |
| ದಮಯಂತಿಯು ನಳನಿಗಾಗಿ ಹಂಬಲಿಸುತ್ತ ಕಾಡಿನಲ್ಲಿ ಹೋಗುತ್ತಿರುವಾಗ ತನ್ನನ್ನು ಕಾಮಿಸಿ ಬಂದ ನಿಷಾದನನ್ನು ಕೋಪದಿಂದ ನೋಡಲು ಅವನು ಬೂದಿಯಾದುದು .... .... | ೫೪೧–೫೫೯ |
| ದಮಯಂತಿಯು ವರ್ತಕರ ಗುಂಪನ್ನು ಕಂಡು ಅವರ ಸಮೀಪಕ್ಕೆ ಹೋಗುವ ವೇಳೆಗೆ ಸರಿಯಾಗಿ ಕಾಡಾನೆಯೊಂದು ಆ ವರ್ತಕರನ್ನು ತೊಂದರೆ ಪಡಿಸಲು, ಆ ವರ್ತಕರು ಇದು ದಮಯಂತಿಯಿಂದಲೇ ಸಂಭವಿಸಿತೆಂದು ಹೇಳುತ್ತಿದ್ದುದನ್ನು ಕೇಳಿ ಅವಳು ಅವರನ್ನು ಬಿಟ್ಟು ಕೆಲವು ಬ್ರಾಹ್ಮಣರೊಡಗೂಡಿ ಅನಂತನಿಧಿ ಪಟ್ಟಣವನ್ನೈದಿ ಅಲ್ಲಿ ರಾಜಗೃಹದಲ್ಲಿದ್ದುದು .... .... | ೫೭೦–೫೭೪ |
| ದಮಯಂತಿಯು ಅನಂತನಿಧಿ ಪಟ್ಟಣದಲ್ಲಿರುವುದನ್ನು ತಿಳಿದ ಭೀಮರಾಜನು ಅವಳನ್ನು ಕುಂಡಿನ ನಗರಕ್ಕೆ ಕರೆಸಿದುದು .... .... | ೫೭೫–೫೭೮ |

| ವಿಷಯ | ಪದ್ಯಸಂಖ್ಯೆ |
|---|---|
| ವನದ ವರ್ಣನೆ .... .... | ೫೭೯–೫೮೨ |
| ಕಾಡಿನಲ್ಲಿ ದಾವಾಗ್ನಿಗೆ ತುತ್ತಾಗಿದ್ದ ಕಾರ್ಕೋಟಕನನ್ನು ನಳನು ಕಾಪಾಡಲು ಅದು ಅವನನ್ನು ಕಚ್ಚಿದುದು. ವಿರೂಪವನ್ನು ಹೊಂದಿದ ನಳನು ಅಯೋಧ್ಯೆಗೆ ಹೋದುದು .... .... | ೫೮೩–೬೦೮ |
| ಅಯೋಧ್ಯಾ ನಗರಿಯ ವರ್ಣನೆ .... | ೬೦೯–೬೩೭ |
| ನಳನು ಋತುಪರ್ಣನ ಅಶ್ವಶಾಲೆಗೆ ಬಂದುದು .... | ೬೩೮–೬೪೦ |
| ವಿಧಿಯ ಮಹಿಮೆ .... .... | ೬೪೧–೬೪೫ |
| ನಳನು ಬಾಹುಕವೆಸರಿನಿಂದ ಅಶ್ವಶಾಲೆಯಲ್ಲಿ ವಾಜಿವೃಂದ ವನ್ನು ಆರೈವುತಿದ್ದುದನ್ನು ನೋಡಿ ಋತುಪರ್ಣನು ಬಾಹುಕನನ್ನು ಮನ್ನಿಸಿದುದು .... | ೬೪೬–೬೫೨ |
| ನಳನನ್ನು ಹುಡುಕುತ್ತ ಬಂದ ಚಾರನು ವಾಜಿಶಾಲೆಯ ಬಾಗಿಲಲ್ಲಿ ವಿಶ್ರಮಿಸಿಕೊಂಡಿರುವಾಗ ನಳನು ಅವ ನೊಡನೆ ನಡೆಸಿದ ಸಂಭಾಷಣೆಯನ್ನು ಚಾರನು ದಮಯಂತಿಗೆ ತಿಳಿಸಿದುದು .... | ೬೫೩–೬೬೩ |
| ದಮಯಂತಿಯ ಅಭಿಪ್ರಾಯದಂತೆ ಋತುಪರ್ಣನ ಆಸ್ಥಾನ ದಲ್ಲಿ ಬ್ರಾಹ್ಮಣನೊರ್ವನು ಪುನಸ್ಸ್ವಯಂವರ ವಿಚಾರ ವನ್ನು ತಿಳಿಸಲು ಸ್ವಯಂವರದ ವೇಳೆಗೆ ಕುಂಡಿನ ನಗರಕ್ಕೆ ತಲುಪಿಸುವೆನೆಂದು ಹೇಳಿದ ಬಾಹುಕನ ಭರವಸೆಯಿಂದ ಋತುಪರ್ಣನು ಹೊರಟುದುದು | ೬೬೪–೬೮೧ |
| ರಥದ ವರ್ಣನೆ .... .... | ೬೮೨–೬೮೮ |
| ಬಾಹುಕನು ತನಗೆ ಅಶ್ವವಿದ್ಯೆಯು ತಿಳಿದಿರುವುದೆಂದು ಋತುಪರ್ಣನಿಗೆ ತಿಳಿಸಲು ರಾಜನು ತನಗೆ ತಿಳಿದಿದ್ದ ಅಕ್ಷವಿದ್ಯೆಯ ವಿನಿಮಯದಿಂದ ಅಶ್ವವಿದ್ಯೆಯನ್ನು ತಿಳಿಯಲಿಚ್ಛಿಸಿ ಬಾಹುಕನಿಗೆ ಅಶ್ವವಿದ್ಯೆಯನ್ನು ಪದೇಶಿಸಿದ ಕೂಡಲೆ ಕಲಿಯು ಬಾಹುಕನನ್ನು ಬಿಟ್ಟುದುದು .... .... | ೬೮೯–೬೯೭ |
| ಕುಂಡಿನನಗರಿಗೆ ಬಂದ ಋತುಪರ್ಣನನ್ನು ದಮಯಂತಿಯ ಆಣತಿಯಂತೆ ಸಖಿಯು ಒಂದು ತಾಣದಲ್ಲಿಳಿಸಿದುದು | ೬೯೮–೭೦೨ |
| ದಮಯಂತಿಯು ಬಾಹುಕನನ್ನು ನಳನೆಂದು ಶಂಕಿಸಿ ಅದನ್ನು ದೃಢಪಡಿಸಿದುದು .... | ೭೦೩–೭೨೧ |

| ವಿಷಯ | ಪದ್ಯಸಂಖ್ಯೆ |
|---|---|
| ನಳನು ಕಾರ್ಕೋಟಕನು ಕೊಟ್ಟ ವಸ್ತ್ರವನ್ನು ಹೊದೆದು ನಿಜ ರೂಪವನ್ನು ತಾಳಿದೊಡನೆಯೇ ದಮಯಂತಿಯು ಅವನ ಕಾಲಿಗೆರಗಲು ಅವನು ತನ್ನ ಮನೋರಮೆಯನ್ನು ನೋಡಿದುದು .... | ೭೨೨–೭೩೨ |
| ದಮಯಂತಿಯ ವರ್ಣನೆ .... .... | ೭೩೩–೭೪೧ |
| ದಮಯಂತಿಯೊಡನೆ ನಳನಿದ್ದ ಸಮಾಚಾರವನ್ನು ಕೇಳಿದ ಭೀಮರಾಜನು ಅಲ್ಲಿಗೆ ಬಂದು ಅಳಿಯನನ್ನು ಅಲಂಕರಿಸಿ ಅವನ ವೃತ್ತಾಂತವನ್ನು ಬೆಸಗೊಂಡುದುದು .... .... | ೭೪೨–೭೪೭ |
| ಋತುಪರ್ಣನು, ಬಾಹುಕನು ನಳನಾದುದನ್ನು ಕೇಳಿ ತಿಳಿದು ನಳನ ಸಮೀಪಕ್ಕೆ ಬಂದು ಅವನಿಂದ ಕಲಿತುಕೊಂಡ ಅಶ್ವವಿದ್ಯೆಯಿಂದ ಅಯೋಧ್ಯೆಗೆ ಹಿಂತಿರುಗಿದುದು .... .... | ೭೪೮–೭೫೧ |
| ನಳನು ಪುಷ್ಕರನೊಡನೆ ಮರುಜೂಜಾಡಲು ನಿಷಧ ಪಟ್ಟಣಕ್ಕೆ ಹೋದುದು .... .... | ೭೫೨–೭೫೪ |
| ಜೂಜಿನ ವರ್ಣನೆ .... .... | ೭೫೫–೭೬೦ |
| ಜೂಜಿನಲ್ಲಿ ಸೋತ ಪುಷ್ಕರನಿಗೆ ಅವನು ಹಿಂದೆ ಪಾಲಿಸುತ್ತಿದ್ದ ಎರಡೂರನ್ನು ಬಿಟ್ಟುಕೊಟ್ಟು ಕಳುಹಿಸಿದುದು | ೭೬೧–೭೬೬ |
| ದುಷ್ಟಪುಷ್ಕರನು ಹೋಗಿ ನಳನು ಪುನಃ ನಿಷಧರಾಜನಾದನೆಂಬ ಸುದ್ದಿಯನ್ನು ಕೇಳಿ ಬಿಟ್ಟು ಹೋಗಿದ್ದ ಪುರಜನರು ಮತ್ತೆ ನಿಷಧನಗರಕ್ಕೆ ಬಂದು ನೆಲಸಿದುದು .... .... | ೭೬೭–೭೭೧ |
| ನಳನು ದಮಯಂತಿಯನ್ನು ವಿದರ್ಭನಗರದಿಂದ ಕರಸಿ ಪತ್ನೀಪುತ್ರರೊಡನೆ ಸುಖವಾಗಿ ರಾಜ್ಯಭಾರ ಮಾಡುತ್ತಿದ್ದುದು .... .... | ೭೭೨–೭೭೪ |
| ಫಲಶ್ರುತಿ .... .... | ೭೭೫ |
| ಚೌಂಡರಸನು ರಚಿಸಿರುವ ಕೃತಿಗಳು .... | ೭೭೬ |

ಲ್ದಾಟವಿಕರೊಡನೆ ನಡೆದು ಮ
ಹಾಟವಿಯಂ ಪೊಕ್ಕು ಬೇಂಟೆಗನುವಾಗಿರ್ದಂ ॥೨೦॥

ಅತ್ತಿ ಕಪಿತ್ಥವಿಪ್ಪೆ ಖದಿರಂ ಮದನಂ ಕರಿಕಕ್ಕೆ ಬಿಕ್ಕೆ ಮುಳ್
ಮುತ್ತಮಶೋಕೆ ಮಾವು ಬದರೀತರು ಸಲ್ಲಕಿ ಬನ್ನಿ ಹೊನ್ನೆಯು ।
ತುತ್ತೆ ಶಿರೀಷಪಿಂಗುಳವರಿಷ್ಟವಗೋತ್ಪಲ ಸಿಗ್ಗು ಗುಗ್ಗುಳಂ
ಮತ್ತಮನೇಕವೃಕ್ಷತತಿಯಿಂದೆಸೆದಿರ್ದುದು ತದ್ವನಾಂತರಂ ॥೨೧॥

ನಸೆಯಿಂ ಮುಂಗೆಟ್ಟು ತನ್ನಂ ಮಱೆದು ಮಱುಕದಿಂ ಕಣ್ಗಳಂ ಮುಚ್ಚಿನಿಚ್ಚಂ
ಪಸಿವಂ ನೀರಡ್ಕೆಯಂ ನಿದ್ರೆಯನಱಿಯದೆ ಹೃತ್ತಾಪದಿಂ ಕಂದಿ ನಾಲ್ಕುಂ ।
ದೆಸೆಯೊಳ್ ತನ್ನಾರ್ಪಿನಂ ಹುಲ್ಲೆಯನಱಸಿಯುವಂ ಕಾಣದಶ್ರುಪ್ರವಾಹಂ
ನಿಸದಂ ಸೂಸಲ್ ಕರಂ ಬೆಳ್ಳೆರಳೆ ಪರವಶಂಬಟ್ಟು ಕಾಲ್ಗೆಟ್ಟುದಾಗಳ್ ॥೨೨॥

ಅದನೀಕ್ಷಿಸಿ ನಳನರಪತಿ
ಯಿದು ಮತ್ಸಖಿಯೆಂದೊಡಾಕ್ಷಣಂ ಕಡುಪಿಂದಂ ।
ಹೃದಯದ ತಾಪಂ ಪೆರ್ಚಲ್
ಪದುಳಿಸಿಕೊಂಡಂ ಮಗುಟ್ದು ಧೀರೋದಾತ್ತಂ ॥೨೩॥

ಎಕ್ಕೆಯಿನಿರ್ಪ ಪುಲ್ಲೆಗಳನಿಲ್ಲಿಯೆ ಮಗ್ಗಿಸು ಗಂಡುಗೆಯ್ದುಪೋ
ಪೆಕ್ಕಲವಂದಿಯಂ ತಿವಿ ತರಕ್ಷುವದಿರ್ದಪುದೀ ನಿಕುಂಜದೊಳ್ ।
ಪೊಕ್ಕಱಿ ನಿಂದ ಪೆರ್ಗರಡಿಯಂ ಕಡುಪಿಂ ಕವಲಂಬನೆಚ್ಚು ಕೊಂ
ಡಿಕ್ಕೆನುತಿರ್ಪ ಬೇಂಟೆಯ ಮಹಾಧ್ವನಿ ಪೊಣ್ಮಿದುದೆಲ್ಲಿ ನೋಪ್ಪೊಡಂ ॥೨೪॥

ಕೆಲಸಾರ್ ಪೋಗದಿರಿತ್ತಬಾ ತುಡುಕದಿರ್ ಜೂಲನ್ನಾಯ್ಗಳಂ ಬಿಟ್ಟುಕೂ
ಱಲಗಂ ತಿತ್ತಿರಿನೋಡಿ ಗಿಬ್ಬಡಿಗೊಳಿಂ ಮುಂಗೆಟ್ಟು ಬೆಂಬೀಟ್ವೆನಂ ।
. . . . . . . . . . . . . . . .
. . . . . . . . . . . . . . ॥೨೫॥

ಉರಿಗಣ್ ಕೆತ್ತುವ ಮಿಾಸೆ ಪೆರ್ಚಿದ ಕೊರಲ್ ಪೆರ್ಬಾಲವುದ್ದಂಡವ
ಕ್ರರದಂ ಮಿಂಚುವ ಮೆಯ್ ಭಯಂಕರರವಂ ನೀಳ್ದಂಘ್ರಿಯುದ್ಯನ್ನಖಾಂ ।
ಕುರಮುನ್ಮಾರ್ಗಗತಿಪ್ರಚಾರವೆನಿಸುಂ ಚೆಲ್ವಾಗೆ ತತ್ಕಾನನಾಂ
ತರದೊಳ್ ಪೆರ್ಬುಲಿಯಿರ್ದುದೇಣಕುಲಮಂ ನಿಶ್ಶೇಷಮಂ ಮಾಡುತಂ
॥೨೬॥

ಸತ್ಯಮೆನುತ್ತೆ ಮನ್ನಿಪುದು ಬಿನ್ನವಿಪೆಂ ಚರಣಕ್ಕನಾರತಂ
ಭೃತ್ಯಸಮಂ ರಹಸ್ಯಮನೊಡಂಬಡು ದೂರಿರವೇಟ್ಪುದೆಲ್ಲರಂ ॥೧೧೩॥

ವ॥ ಅಂತೆಗೆಯ್ಯಲನಂತರಂ,

ನಿನಗಾಂ ಮಾಟ್ಪುಪಕಾರಮಾವುದು ಕಳಾಸಂಪನ್ನೆ ಸೌಭಾಗ್ಯವ
ರ್ಧನೆಯಿರ್ಪಳ್ ದಮಯಂತಿ ಕುಂಡಿನಪುರಕ್ಕಾಂ ಬೇಗದಿಂ ಪೋಗಿ ಮಾ।
ನಿನಿಯಂ ನಿನ್ನೊಡಗೂಡುವಂತೆಸಗಿ ಮತ್ತಾವಾರ್ತೆಯಂ ಪೇಟ್ಪು ಸ
ಜ್ಜನನಪ್ಪೆಂ ತೊದಳಿಲ್ಲೆನುತ್ತೆ ನುಡಿದಂ ಹಂಸೋತ್ತಮಂ ಸತ್ಯಮಂ
॥೧೧೪॥

ಆ ನುಡಿಗೆ ಮೆಚ್ಚಿ ಭೂಪಂ
ಜ್ಞಾನಿಯೆನಿಪ್ಪಂಚೆಯಂ ಕರಂ ಮನ್ನಿಸಿ ಮ।
ನ್ಮಾನಸಮನಱಿದ ನಿನ್ನನ
ದೇನೆಂದುಪಚರಿಪೆನೆಂದದಂ ಬೀಳ್ಕೊಟ್ಟಂ ॥೧೧೫॥

ವ॥ ಅಂತೊಳ್ಪಿನಿಂ ಬೀಳ್ಕೊಟ್ಟು,

ಎತ್ತಣ ಬೇಂಟೆಯೆತ್ತಣ ಸರೋವರವೆತ್ತಣ ಹಂಸೆ ನಾಡೆ ತು
ಚ್ಚಿತ್ತದ ತಾಪಮಂ ತಿಳಿವುದೆತ್ತಣದೇತೆಱದಿಂ ವಿದರ್ಭೆಯಂ।
ಪತ್ತಿರೆ ತಪ್ಪೆನೆಂಬ ಬಗೆಯೆತ್ತಣದೆಂದು ನೃಪಂ ಬಟಿಕ್ಕೆ ಲೋ
ಕೋತ್ತಮವಾದ ತದ್ವಿಮಳಪಟ್ಟಣಮಂ ಪುಗುತಂದನಟ್ಟಿಯಿಂ ॥೧೧೬॥

ತೊಳಗುವ ಪೂರ್ಣಚಂದ್ರಮುಖಮಂಡಲದಿಂದಮದೆಂದು ಚಿತ್ತಮಂ
ಬೆಳಗುವಳೋ ಕುಚಾದ್ರಿಯೊಳದೆಂದು ಮನೋಮೃಗಮಂ ನಿರಂತರಂ।
ಸುಟಿಸುವಳೋ ಕಟಾಕ್ಷಮಣಿಹಾರಮದೆಂದು ಮದೀಯ ಕಂಠದೊಳ್
ಕೊಳಿಸುವಳೋ ಸಮಂತು ದಮಯಂತಿಯೆನುತ್ತತಿಚಿಂತಿಪಂ ನೃಪಂ ॥

ಅತ್ತ ವಿದರ್ಭಭೂಪತಿಯ ಕುಂಡಿನಪಟ್ಟಣದೊಪ್ಪಮಂ ಮುದಂ
ಬೆತ್ತಱೆ ಪೋಗಿ ಕಂಡದಱ ಪಾರ್ಶ್ವದೊಳಿರ್ಪ ವನಪ್ರದೇಶದೊಂ।
ದುತ್ತಮ ಪದ್ಮಷಂಡದೊಳನೇಕ ಜಳಾಂಡಜವಿರ್ದವಲ್ಲಿ ಮ
ಚ್ಚಿತ್ತವಿಳಾಸಮೆಂದು ನಲವಿಂ ನೆಲಸಿರ್ದುದು ಮಾನಸೌಕಸಂ ॥೧೧೮॥

ಬಕ್ಕುಗಳಂಚೆ ಕೊಂಚೆ ಜಳವಾಯಸಸಂತತಿ ಜಕ್ಕವಕ್ಕಿ ಬೆ
ಳ್ವಕ್ಕಿ ಕರಂಡೆ ಕೊಂಕುಟಿಲೆ ಮೂಡಿಮುಟುಂಗುವನಂಬುಕುಕ್ಕುಟಂ।
ಬಕ್ಕು ಬಳಾಕಿ ಮಿಾಂಬುಲಿಗನೊಪ್ಪುವ ಸಾರಸವಕ್ಕಿಯೆಂಬ ನೀ
ರ್ವಕ್ಕಿಗಳಿಂ ಮನಂಗೊಳಿಸುತಿರ್ಪುದು ಪೂಗೊಳನಂಬುಜಾವಳಂ ॥೧೧೯॥

ಮುಂದಡಿಯಿಟ್ಟು ಜೀರ್ಕೊಟವೆಯಿಂ ಜಲಧಾರೆಗಳೆಚ್ಚುಪಾಯಲಾ
ನಂದದಿನೊತ್ತಲೊರ್ವಳ ಲಸನ್ಮುಖದೊಳ್ ದಮಯಂತಿ ನೋಡಲೊ ।
ಳ್ಪಿಂದೆಸೆದತ್ತು ರಾಹು ನಿಡುನಾಲಗೆಯಿಂ ಮಿಗೆ ನೀಡಿದಂತೆ ಪೂ
ರ್ಣೇಂದುವ ಮಂಡಲಕ್ಕೆ ದಿಟವೆಂಬಭಿಶಂಕೆಯನಂಬುಕೇಳಿಯೊಳ್ ॥೧೩೮॥

ತಾವರೆಗಿಂಡು ಬೇಪ್ಪಿಗೆ ಮುದಂ ಮಿಗೆ ಕೈಗೊಳಗಾದುವೆಂಬಿನಂ
ಭಾವಕಿ ಶೋಣಪದ್ಮಕರಪಲ್ಲವದೊಳ್ ಕರಿದಂತಶೃಂಗವಂ ।
ತೀವಿದ ನಿರ್ಮಲಾಂಬುಸಹಿತಂ ಪಿಡಿದೆಲ್ಲಿಗೆ ಪೋಪೆ ತಂಗಿಯಿಂ
ದೋವದೆ ಪೊಯ್ದಳಾ ಜಲವನೊರ್ವಳ ಮೇಲೆ ನವಾಂಬುಕೇಳಿಯೊಳ್
॥೧೩೯॥

ವಾರಿಯನೊಪ್ಪೆ ಸೂಸೆ [1]ಪೆಟಿಮೆಟ್ಟುವ[1] ತಪ್ಪಿಸಿಕೊಳ್ವ ನಿಲ್ವ ನೀ
ರ್ಧಾರೆಗೆ ಕಯ್ಯನೊಡ್ಡುವ ಕೆಲಕ್ಕೆ ನುಸುಳ್ವ ಮಗುಟ್ವ ಮುಂದೆ ಮುಂ।
ದೋರಡಿಯಿಟ್ಟು ಲಂಘಿಸುವ ತಪ್ಪಿಸಿಕೊಳ್ವ ಬಟಲ್ದುನಿಲ್ವ ವಿ
ಸ್ತಾರವಗುರ್ವಿಸಲ್ ಸಲಿಲಕೇಳಿಯೊಳಿರ್ದುದು ಕಾಮಿನೀಜನಂ ॥೧೪೦॥

ವ॥ ಅಂತು ತಮತಮಗೆ ಕಮಳಕೈರವಕಲ್ಹಾರಪತ್ರದಿಂ ಕಟ್ಟಿದ ಪೊಟ್ಟಣವನಿಟ್ಟಿಟ್ಟಾಡುತ್ತಂ, ಕರಿದಂತಕಾಂತತುಂಗಶೃಂಗದಿಂ ಮುನ್ನಿಡುವಂತಂಗೈಸಿ ಪಾಯ್ದು ಪೊಯ್ದು ಪಿಂಗುತ್ತಂ, ನವಮಣಿಗಣದ ಕೇವಣದಿಂ ಕೌತುಕಂಬಡೆದ ಹೊನ್ನತೋರ್ಕೆಯ ಜೀರ್ಕೊಟವೆಯನೊತ್ತೊತ್ತಿ ಪತ್ತೆಸಾರುತ್ತಂ, ಸೆಳ್ಳುಗುರ ಬೆಳಗು ಪಲ್ಲವಿಸೆ ಪಲ್ಲವಕರದಿನೆಲ್ಲರ ಮೇಲೆ ಚಲ್ಲಿ ಚಲ್ಲಿ ನಿಲ್ಲದಿರುತ್ತಂ, ತೆರೆದುಱುಗಲ ತಿಂತಿಣಿಯೊಳೊರ್ವರಂ ನೂಂಕಿ ನೂಂಕಿ ನಸುನಗುತ್ತಂ, ಕಮಲನಾಳಂಗಳಂ ಕಿಟ್ಟು ಕಿಟ್ಟು ಕೊರಲ್ಗೆ ತೊಡಂಕಿಸಿ ನೀರೊಳ್ ಕೆಡಪಿ ಸಾರುತ್ತಂ, ಪೆಟಿಗಣಿಂ ಬಂದು ಕಣ್ಗಳಂ ಮುಚ್ಚಿ ಸುಟಿಗಳೊಳ್ ಮುಱುಂಗಿಸಿ ಮೊಯ್ದೆಗೆಯುತ್ತಿರ್ಪ ವಿಳಾಸಿನೀಜನದ ನಡುವೆಯುಂತುಮಲ್ಲದೆಯುಂ,

ತನುರೋಮಾಂಚನವಪ್ಪುಕೆಯ್ಯಲಧರಂ ಬೆಳ್ಪಾಗಲಂಗಂ ಸಕಂ
ಪನದಿಂ ರಂಜಿಸಲಕ್ಷಿಗಳ್ ತೊಳಗಲಂಭೋಬಿಂದುಗಳ್ ಕರ್ಕಶ ।
ಸ್ತನದೊಳ್ ತುಂಬಿರಲಂದಪೂರ್ವಜಲಕೇಳೀರಾಗದಿಂ ಚಿತ್ತಕಾಂ
ತನ ಸಂಗಂಬಡೆದಂತೆ ಮೈಮೆವಡೆದಳ್ ವೈದರ್ಭಿ ವಿಶ್ರಾಂತಿಯಿಂ
॥೧೪೧॥

ನಾರಿ ಮಗುಟ್ದು ಪೂಗೊಳನ ಪಕ್ಷಿಗಳೊಪ್ಪವನೀಕ್ಷಿಸುತ್ತಿರಲ್
ದೂರದೊಳಿರ್ದುದಲ್ಲಿ ತಪನೀಯ ಪತತ್ರದ ಚೆನ್ನಹಂಸೆ ಚಿಂ ।

---

[1] ಪೆಟಿವೇಂಟುವ.

ರಣಧೀರಂ ಸಾರ್ವಭೌಮಂ ನಿಷಧಪತಿ ಮಹಾವೀರಸೇನಾತ್ಮಜಂ ಸ
ದ್ಗುಣವಂತಂ ಸಾಧುಸಂಗಂ ವಿತರಣವಿಭವಂ ನೀತಿಸನ್ಮಾನಿ ಭೂಪಾ ।
ಗ್ರಣಿ ಪುಣ್ಯಶ್ಲೋಕನಾದ್ಯಂ ನಳನೃಪನಿದು ಸತ್ಯಂ ತ್ರಿಲೋಕೈಕಚೂಡಾ
ಮಣಿ ಕೇಳ್ ನಿನ್ನಂದವಂ ಕೇಳ್ದುಱಿವನೆನಗೆ ಮಿತ್ರಂ ಸಿತಾಂಭೋಜನೇತ್ರೇ
॥೧೪೯॥

ಧೀರೋದಾತ್ತಂ ಜಲಧಿಗ
ಭೀರಂ ಶರಣಾಗತಪ್ರತಿಷ್ಠಾಪಕನು ।
ಗ್ವಾರಿಕುಲಕಮಲವನಮುದ
ವಾರಣನರ್ಕಪ್ರಕಾಶನಾ ವಿಮಳೇಶಂ ॥೧೫೦॥

ಅತುಳವಿಜಯಪ್ರತಾಪಂ
ಸತತಂ ಭೂಭುವನಭವನಮಣಿಮಯದೀಪಂ ।
ಚತುರವನಿತಾಮನೋಜಂ
ವಿತರಣಗುಣನೈಜನಧಿಕನಾ ಯುವರಾಜಂ ॥೧೫೧॥

ನಯನಾಭಿರಾಮದೇಹಂ
ನಿಯತೇಂದ್ರಿಯನಖಿಳಧರ್ಮ ಮಣಿಸನ್ನಾಹಂ ।
ನಯವಿನಯನಿತ್ಯಶೀಲಂ
ಜಯಕಾಂತಾಕಾಂತನಲ್ತೆ ನಳಭೂಕಾಂತಂ ॥೧೫೨॥

ಕಾರುಣ್ಯಸುಧಾಸಾರಂ
ನಾರೀಜನಚಿತ್ತವಶ್ಯಮದನಾಕಾರಂ ।
ಭೂರಮಣೀಕುಚಹಾರಂ
ಸಾರಜ್ಞಂ ಧೀರವೀರಸೇನಕುಮಾರಂ ॥೧೫೩॥

ನಿಷಧವಿಷಯಾಧಿನಾಥಂ
ವಿಷಯೇಂದ್ರಿಯನಿಯತನಖಿಳಪಾವನನಾಥಂ ।
ವಿಷಮಚರಿತ್ರವಿದೂರಂ
ಝಷಕೇತನಮೂರ್ತಿ ಸಕಲಭುವನಾಧಾರಂ ॥೧೫೪॥

ಕ್ಷತ್ರಿಯವಂಶಪವಿತ್ರಂ
ದ್ವಾತ್ರಿಂಶಲ್ಲಕ್ಷಣಾನ್ವಿತಂ ಸುಚರಿತ್ರಂ ।
ಸ್ತೋತ್ರೈಕಪಾತ್ರಕಾಯಂ
ಶತ್ರುವ್ರಜವಿಜಯನೀತಿವಿವಿಧೋಪಾಯಂ ॥೧೫೫॥

